


# ಜಲ ಮಾಲಿನ್ಯವನ್ನು ಎದುರಿಸಲು ಕಾನೂನಿನ ಬಳಕೆ

ಉಲ್ಲೇಖ:
ಸೆಂಟರ್ ಪಾರ್ ಪೊಲಿಸಿ ರಿಸರ್ಚ್ ಮತ್ತು ನಮತಿ, ,
ಸಮುದಾಯ ಮಟ್ಟದ ಪರಿಸರ ನ್ಯಾಯ ವೃತ್ತಿಗಾರರಿಗಾಗಿ
ಕಾನೂನು ಮತ್ತು ಆಡಳಿತಾತ್ಮಕ ಪರಿಹಾರದ ಕೈಪಿಡಿ
ಸಿ.ಪಿ.ಅರ್- ನಮತಿ ಪರಿಸರ ನ್ಯಾಯ ಯೋಜನೆ
ನವ ದೆಹಲಿ.

ಸೂಚನೆ:
ಈ ಕೈಪಿಡಿಯ ಕುರಿತು ಹಕ್ಕುಸ್ವಾಮ್ಯ ಇರುವುದಿಲ್ಲ.
ಈ ಕೈಪಿಡಿಯನ್ನು ವಿನಿಮಯ ಮಾಡಲು, ಅನುವಾದ ಮಾಡಲು ಹಾಗು
ವಿತರಿಸಲು ಮುಕ್ತರಾಗಿರುತ್ತೀರಿ. ನಾವು ಈ ಪ್ರತಿಯ ಮೂಲವನ್ನು
ಉಲ್ಲೆಖಿಸಬೇಕಾಗಿ ಹಾಗು ನಿಮ್ಮ ಮರು ಮುದ್ರಣದ ಪ್ರತಿ / ಅಂತರ್ಜಾಲ ಕೊಂಡಿಯನ್ನು
ಸಿ.ಪಿ.ಅರ್- ನಮತಿ ಪರಿಸರ ನ್ಯಾಯ ಯೋಜನೆ
ನವ ದೆಹಲಿ ಕಳುಹಿಸಬೇಕಾಗಿ ಕೋರಿಕೊಳ್ಳುತ್ತೇವೆ.

ಕನ್ನಡ ಅನುವಾದ: ಕಮಲಾ ಅನಿಲಕುಮಾರ್
ಪ್ರೂಫ್  ರಿಡಿಂಗ್ (ಕನ್ನಡ) : ಮಹಾಬಲೇಶ್ವರ ಹೆಗಡೆ
ವಿನ್ಯಾಸ: ರೇ ಜ಼ಕಾರಿಯಾ
ಮುದ್ರಣ: ಪ್ರಿಂಟ್ ಫ಼ೋರ್ಸ್


'ದುಲೀಪ್ ಮಥಾಯ್ ನೇಚರ್ ಕನ್ಸರ್ವೇಶನ್ ಟ್ರಸ್ಟ್' (ಡಿ ಎಮ್  ಎನ್ ಸಿ ಟಿ) ನಿಂದ
ಈ ಸಂಶೋಧನಾ ಕಾರ್ಯವು ನೆರವು ಪಡೆದಿರುತ್ತದೆ.



# ‘ಜಲ ಮಾಲಿನ್ಯ’ ಎಂದರೆ ಏನು?

# 01 ಜಲ ಮಾಲಿನ್ಯ ಎಂದರೆ ಏನು?

ನೀರು ಕಲುಷಿತಗೊಂಡಿದ್ದಾಗ ಅಥವಾ, ಅದರ ಗುಣಲಕ್ಷಣಗಳಲ್ಲಿ ಮಾರ್ಪಾಡು ಆಗಿದ್ದಲ್ಲಿ, ಅಥವಾ ನೀರಿನೊಳಗೆ (ಮಲ ಮೂತ್ರ ಮತ್ತಿತರ) ರೊಚ್ಚಿನ ವಿಸರ್ಜನೆ ಅಥವಾ ಉದ್ಯಮಗಳಿಂದ ಹೊರಸೂಸಿಕೆ ಆಗುತ್ತಿದ್ದಾಗ, ಅಥವಾ, ಅದರೊಳಗೆ ಯಾವುದೇ ದ್ರವ ರೂಪದ, ಅನಿಲರೂಪದ ಅಥವಾ ಘನ ರೂಪದ ಹರಿವು ಬಂದು ಸೇರಿದರೆ, ಇವೆಲ್ಲದರಿಂದ ನೀರಿಗೆ ಕೆಡಕು ಅಥವಾ ಹಾನಿಯುಂಟಾಗುವ ಸಂಭವವಿದ್ದು. ಅದರಿಂದ,



- ಸಾರ್ವಜನಿಕರ ಆರೋಗ್ಯ ಮತ್ತು ಸುರಕ್ಷತೆಯ ಮೇಲೆ;
- ಗೃಹಬಳಕೆ, ವಾಣಿಜ್ಯ, ಕೃಷಿ, ಔದ್ಯಮಿಕ ಮತ್ತು ಇನ್ನಿತರ ಕಾನೂನುಬದ್ಧ ಬಳಕೆಗಳ ಮೇಲೆ ;
- ಪ್ರಾಣಿ, ಸಸ್ಯ, ಮತ್ತು ಇತರ ಜಲಜಂತುಗಳ ಜೀವಮಾನ ಮತ್ತು ಸ್ವಾಸ್ಥ್ಯದ ಮೇಲೆ; ಪರಿಣಾಮವುಂಟಾದಾಗ, ಅದನ್ನು ಜಲ ಮಾಲಿನ್ಯವೆಂದು ಪರಿಗಣಿಸಲಾಗುತ್ತದೆ.

## ಬಹುತೇಕವಾಗಿ ಯಾವುದನ್ನು ಜಲ ಮಾಲಿನ್ಯವೆಂದು ಉಲ್ಲೇಖಿಸಲಾಗುತ್ತದೆ

ಔದ್ಯಮಿಕ , ಗೃಹಬಳಕೆ ಮತ್ತು ಕೃಷಿಕ ಚಟುವಟಿಕೆಗಳಿಂದ ಜಲ ಮಾಲಿನ್ಯವುಂಟಾಗಬಹುದು. ಈ ಕರಪತ್ರವು ಪ್ರಮುಖವಾಗಿ ಔದ್ಯಮಿಕ ಜಲ ಮಾಲಿನ್ಯದ ಕುರಿತಾಗಿರುತ್ತದೆ.

**ಔದ್ಯೋಮಿಕ**

ರಾಸಾಯನಿಕಗಳು: ಆರ್ಸನಿಕ್,ಸೀಸ, ಪಾದರಸ,ನೈಟ್ರೇಟ್ ಗಳು ಮತ್ತು ಗಂಧಕ

ತೈಲಗಳು ಮತ್ತು ಕಲ್ಲೆಣ್ಣೆ ರಾಸಾಯನಿಕಗಳು (ಪೆಟ್ರೊಕೆಮಿಕಲ್ಸ್)

**ಗೃಹಬಳಕೆ**

ರೊಚ್ಚು

ತ್ಯಾಜ್ಯಗಳು

**ಕೃಷಿಕ**

ರಾಸಾಯನಿಕ ಗೊಬ್ಬರ

ಕೀಟ ಮತ್ತು ಕ್ರಿಮಿನಾಶಕಗಳು ಹಾಗೂ ಪೀಡೆ ನಾಶಕಗಳು

## ಜಲ ಮಾಲಿನ್ಯದ ಮೂಲಗಳು ಯಾವುವು ?

### ಗುರುತಿಸಬಹುದಾದ ಏಕೈಕ ಮೂಲ

ಮಾಲಿನ್ಯ ಮೂಲದ ಖಚಿತ ಸ್ಥಳ

### ಹಲವು ಮೂಲಗಳ ವಿಸರಣದಿಂದ ಪರಿಣಮಿಸುವ ಮಾಲಿನ್ಯ

ಖಚಿತವಲ್ಲದ ಮಾಲಿನ್ಯ ಮೂಲ



# 02 ಕಾನೂನು ಮತ್ತು ಲಭ್ಯವಿರುವ ಸಂಸ್ಥೆಗಳು

# 02 ಕಾನೂನು ಮತ್ತು ಲಭ್ಯವಿರುವ ಸಂಸ್ಥೆಗಳು

## ಜಲ ಮಾಲಿನ್ಯದ ಮೇಲ್ವಿಚಾರಣೆಗೆ ಉತ್ತರದಾಯಿ ಸಂಸ್ಥೆಗಳು

| | | |
|---|---|---|
| **ಕಾನೂನು** | • ಜಲ ಅಧಿನಿಯಮ(ಕಾಯಿದೆ) 1974 | • ಪರಿಸರ ಸಂರಕ್ಷಣಾ ಅಧಿನಿಯಮ 1986 |
| **ಕೇಂದ್ರ ಸರಕಾರ** | • ಕೇಂದ್ರ ಮಾಲಿನ್ಯ ನಿಯಂತ್ರಣಾ ಮಂಡಲಿ. | • ಪರಿಸರ, ಅರಣ್ಯ, ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ನವ ದೆಹಲಿ (MOEFCC - ಎಮ್ ಒ ಇ ಎಫ್ ಸಿ ಸಿ) (ಮಿನಿಸ್ತ್ರಿ ಆಫ್ ಎನ್ವೈರನ್ ಮೆಂಟ್, ಫಾರೆಸ್ಟ್ ಅಂಡ್ ಕ್ಲೈಮೇಟ್ ಚೇಂಜ್, ನ್ಯೂ ಡೆಲ್ಲಿ) |
| **ರಾಜ್ಯ** | • ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಲಿ, ಬೆಂಗಳೂರು . | • ಪರಿಸರ, ಅರಣ್ಯ, ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ಬೆಂಗಳೂರು (MOEFCC - ಎಮ್ ಒ ಇ ಎಫ್ ಸಿ ಸಿ) - ಪ್ರಾದೇಶಿಕ ಕಛೇರಿ - ಎಸ್ ಪಿ ಸಿ ಬಿ(SPCB) |
| **ಪ್ರಾದೇಶಿಕ** | • ಪ್ರಾದೇಶಿಕ ಮಾಲಿನ್ಯ ನಿಯಂತ್ರಣ ಮಂಡಲಿಗಳು (ಪೊಲ್ಯೂಶನ್ ಕಂಟ್ರೋಲ್ ಬೋರ್ಡ್) ಪಿ ಸಿ ಬಿಗಳು | |

## ಅವಶ್ಯವಿರುವ ವಿವಿಧ ಬಗೆಯ ಅನುಮತಿಗಳು

### A. ಸ್ಥಾಪಿಸಲು ಸಮ್ಮತಿ – ಕನ್ಸೆಂಟ್ ಟು ಎಸ್ಟಾಬ್ಲಿಶ್, ಸಿ ಟಿ ಇ :

ಯಾವುದೇ ಕೈಗಾರಿಕೋದ್ಯಮ, ಪ್ರಕ್ರಿಯೆ, ಯೋಜನೆಯು ತನ್ನಿಂದ ಉತ್ಪನ್ನವಾಗುವ ರೊಚ್ಚೆ ಅಥವಾ ಹೊರಸೂಸಿಕೆಯನ್ನು ಜಲರಾಶಿಯೊಳಗೆ ಹರಿಯ ಬಿಡುವ ಸಾಧ್ಯತೆ ಇದ್ದಲ್ಲಿ, ಅದಕ್ಕಾಗಿ ವಿಸರ್ಜನಾ ಸ್ಥಳ ಅಥವಾ ಹೊರಗುಂಡಿಯನ್ನು (ಬಹಿದ್ವಾರ)ವನ್ನು ಸ್ಥಾಪಿಸುವ ಮೊದಲೆ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಲಿಯಿಂದ ಜಲ ಅಧಿನಿಯಮ 1974 ಪ್ರಕಾರ ಪೂರ್ವ ಅನುಮತಿಯನ್ನು ಪಡೆಯ ತಕ್ಕದ್ದು.,

### B. ಕಾರ್ಯ ನಿರ್ವಹಿಸಲು ಸಮ್ಮತಿ – ಕನ್ಸೆಂಟ್ ಟು ಆಪರೇಟ್, ಸಿ ಟಿ ಒ :

ಪ್ರತ್ಯಕ್ಷವಾಗಿ ಉತ್ಪಾದನೆಯನ್ನು ಪ್ರಾರಂಭಿಸುವ ಮೊದಲೆ ಪೂರ್ವ ಅನುಮತಿ. ಉದ್ಯಮದ ಮಾದರಿಗೆ (ರೊಚ್ಚು ಅಥವಾ ಹೊರಸೂಸಿಕೆಗಳನ್ನು ಜಲ ರಾಶಿಯೊಳಗೆ ವಿಸರ್ಜಿಸಬಹುದಾದಂತಹ ಯೋಜನೆ, ಕೈಗಾರಿಕೆ, ಪ್ರಕ್ರಿಯೆ) ಅವಲಂಬಿಸಿದಂತೆ - ಸಿ ಟಿ ಒ ಗಳನ್ನು ನಿರ್ದಿಷ್ಟ ಅವಧಿಯವರೆಗೆ ಕೊಡಲಾಗುವುದು -

### C. ಪರಿಸರ ಪರವಾನಗಿ / ಅನುಜ್ಞೆ (ಎನ್ವಿರಾನ್ಮೆಂಟಲ್ ಕ್ಲಿಯರೆನ್ಸ್ ಇ ಸಿ)

('ಪರಿಸರ ಪರಿಣಾಮ ಮೌಲ್ಯೀಕರಣ ಅಧಿಸೂಚನೆ 2006', ಇದರಡಿಯಲ್ಲಿ ಪಟ್ಟಿಮಾಡಿರುವಂತೆ) ಕೆಲ ನಿರ್ದಿಷ್ಟ ಪ್ರಕ್ರಿಯೆ, ಯೋಜನೆಗಳಿಗೆ ಪೂರ್ವ ಪರಿಸರ ಪರವಾನಗಿಯನ್ನು (EC = ಇ ಸಿ) ಪಡೆಯುವುದು ಕಡ್ಡಾಯವಾಗಿರುತ್ತದೆ. ಸಾಮಾನ್ಯವಾಗಿ, ಇ ಸಿ ಯಲ್ಲಿ ಅನುಸರಿಸಲೇಬೇಕಾಗಿರುವ (ಹಲವಾರು)ಷರತ್ತುಗಳಿರುತ್ತವೆ. ಅಲ್ಲದೆ, ಅದರಲ್ಲಿ ಅವಶ್ಯಕತೆ ಇರುವ ನೀರಿನ ಪ್ರಮಾಣ, ವಿಸರ್ಜನಾ ಸ್ಥಳಗಳು, ಅಂತರ್ಜಲ ಮೇಲ್ವಿಚಾರಣೆ ಈ ಮುಂತಾದವುಗಳ ಬಗ್ಗೆಯೂ ಷರತ್ತುಗಳಿರಬಹುದು.

# ಲಭ್ಯವಿರುವ ಕಾನೂನು ನಿಬಂಧನೆಗಳು

## ಜಲ ಅಧಿನಿಯಮದಡಿಯಲ್ಲಿ

ರಾಜ್ಯ ಮಂಡಲಿಯು ಮಂಡಿಸಿರುವ ಮಾನದಂಡಗಳಿಗನುಗುಣವಾಗಿ ನಿರ್ಧರಿಸಲಾಗಿರುವ ವಿಷಪೂರಿತ, ಹಾನಿಕಾರಕ, ಅಥವಾ ಮಾಲಿನ್ಯ ಗೊಳಿಸುವ ಪದಾರ್ಥಗಳನ್ನು ಉದ್ದೇಶ ಪೂರ್ವಕವಾಗಿ ಉತ್ಪಾದಿಸಲು ಅಥವಾ ಉತ್ಪಾದನೆಗೆ ಅನುಮತಿಸಲು ಯಾವುದೇ ವ್ಯಕ್ತಿಗೆ ಅವಕಾಶವಿರುವುದಿಲ್ಲ.

- (ಈ ಪದಾರ್ಥಗಳು) ಯಾವುದೇ ಹೊಳೆ, ಅಥವಾ ಬಾವಿ, ಅಥವಾ ಚರಂಡಿಗಳೊಳಗೆ, ಅಥವಾ ಭೂ ಪ್ರದೇಶದಲ್ಲಿ (ಪ್ರತ್ಯಕ್ಷವಾಗಲಿ ಅಥವಾ ಪರೋಕ್ಷವಾಗಲಿ) ಪ್ರವೇಶಿಸುವಂತೆ ಮಾಡಲು ಯಾವುದೇ ವ್ಯಕ್ತಿಗೆ ಅವಕಾಶವಿರುವುದಿಲ್ಲ.
- (ಈ ಪದಾರ್ಥಗಳು) ಹೊಳೆಯ ಸ್ವಾಭಾವಿಕ ಹರಿವಿಗೆ ಅಡ್ಡಿಪಡಿಸಿ, ಬೇರೆ ಕಾರಣಗಳಿಂದ ಅಥವಾ ಅದರ ಪರಿಣಾಮಗಳಿಂದ ಆಗಿರುವ ಮಾಲಿನ್ಯವು ಗಣನೀಯ ಮಟ್ಟದಲ್ಲಿ ಮತ್ತಷ್ಟು ಉಲ್ಬಣಗೊಳ್ಳುವಂತೆ ಮಾಡಲು ಯಾವುದೇ ವ್ಯಕ್ತಿಗೆ ಅವಕಾಶವಿರುವುದಿಲ್ಲ

## ತುರ್ತು ಕ್ರಮಗಳು

ಜಲ ಅಧಿನಿಯಮದ ಉಪ ವಿಭಾಗ 32 ರ ಮೇರೆಗೆ, ಯಾವುದೇ ಅಪಘಾತವಾದಲ್ಲಿ ಅಥವಾ, ಅನಿರೀಕ್ಷಿತ ಘಟನೆ ಸಂಭವಿಸಿದಲ್ಲಿ ಅಥವಾ ಪ್ರಸಂಗವೊಂದು ಒದಗಿದಲ್ಲಿ, ಮತ್ತು ರಾಜ್ಯ ಮಂಡಲಿಯು ತತ್ ಕ್ಷಣದಲ್ಲಿ ಕ್ರಮ ತೆಗೆದುಕೊಳ್ಳುವುದು ಅವಶ್ಯವೆಂದು ಪರಿಗಣಿಸಿದಲ್ಲಿ, ಆ ಮಂಡಲಿಗೆ ತುರ್ತು ಕ್ರಮಗಳನ್ನು ತೆಗೆದುಕೊಳ್ಳಲು ಅನುಮತಿ ಇರುತ್ತದೆ.

## ಭಾರತ ದಂಡ ಸಂಹಿತೆ 1860, ಇದರಡಿಯಲ್ಲಿ


ಉಪ ವಿಭಾಗ 268, ಈ ಕಾಯಿದೆಯಡಿಯಲ್ಲಿ, ಜಲ ಮಾಲಿನ್ಯದಿಂದಾಗಿ ಸಾರ್ವಜನಿಕರಿಗೆ ಉಪದ್ರವ ಉಂಟಾಗಿದ್ದಲ್ಲಿ ಅದನ್ನು ಸಾರ್ವಜನಿಕ ಉಪದ್ರವವೆಂದು ವ್ಯಾಖ್ಯಾನಿಸಲಾಗುತ್ತದೆ. ಯಾವುದೇ ಒಂದು ಕಾರ್ಯ, ಕ್ರಿಯೆಯಿಂದ ಅಥವಾ ಯಾವುದೇ ಲೋಪದಿಂದ ಆ ಸ್ಥಳದಲ್ಲಿರುವ ಸಾರ್ವಜನಿಕರಿಗೆ, ಹತ್ತಿರದಲ್ಲಿ ವಾಸಿಸುವವರಿಗೆ, ಆ ಹತ್ತಿರದಲ್ಲೆ ಸ್ವಂತ ಭೂಮಿಯಲ್ಲಿ ನೆಲೆಸಿರುವ ಜನ ಸಾಮಾನ್ಯರಿಗೆ ಅಥವಾ ಆ ಸ್ಥಳದಲ್ಲಿ ತಮ್ಮ ಸಾರ್ವಜನಿಕ ಹಕ್ಕನ್ನು ಚಲಾಯಿಸಬಹುದಾದ ಜನರಿಗೆ ಸಾಧಾರಣ ಪೆಟ್ಟು, ಗಾಯವಾದರೆ, ಅಪಾಯ ಒದಗಿ ಬಂದರೆ ಅಥವಾ ಕಿರಿಕಿರಿ ಉಂಟಾದರೆ, ಇವೆಲ್ಲವನ್ನೂ ಸಾರ್ವಜನಿಕ ಉಪದ್ರವ ಎಂದು ಹೇಳಲಾಗುತ್ತಾದೆ. ಈ ಉಪವಿಭಾಗವನ್ನು ಉಪವಿಭಾಗ 19 ರೊಂದಿಗೆ ಬಳಸಿದಾಗ, ಅದು ಜಿಲ್ಲಾ ಕಲೆಕ್ಟರ್ ಅವರಲ್ಲಿ ನ್ಯಾಯಮೂರ್ತಿಯು(ಜಡ್ಜ್) ದೂರನ್ನು ದಾಖಲಿಸಬಹುದೆಂದು ಖಚಿತಪಡಿಸುತ್ತದೆ.

## ಕಾರ್ಖಾನೆಗಳ ಅಧಿನಿಯಮ, 1948, ಇದರಡಿಯಲ್ಲಿ

ಕಾರ್ಖಾನೆ ಎಂದರೆ, ಉತ್ಪಾದನಾ ಕ್ರಿಯೆ ಜರಗುವ, ಅಲ್ಲಿ ವಿದ್ಯುತ್ ಸರಬರಾಜಿದ್ದು 10 ಕಾರ್ಮಿಕರನ್ನೊಳಗೊಂಡ ಇಲ್ಲವೆ ವಿದ್ಯುತ್ ಸರಬರಾಜಿಲ್ಲದೆ 20 ಕಾರ್ಮಿಕರನ್ನೊಳಗೊಂಡ, ಅದರ ಸುತ್ತಲ ಆವರಣ ಮತ್ತು ಅಲ್ಲಿರುವ ಸಾಧನ ಸಲಕರಣೆಗಳೆಲ್ಲವನ್ನೂ ಒಳಗೊಂಡಿರುವ ಕಟ್ಟಡವೆಂದು ಹೇಳಲಾಗುತ್ತದೆ.

ಆ ಕಟ್ಟಡದಲ್ಲಿ ಕಾರ್ಯಾಚರಣೆ ಆರಂಭಿಸುವ ಮೊದಲು. ಕಾರ್ಖಾನೆಯ ಒಡೆಯರಾದವರು, ಹೆಸರು, ವಿಳಾಸ, ಉತ್ಪಾದನೆಗೆ ಬಳಸುವ ಪ್ರಕ್ರಿಯೆ, ಕಾರ್ಮಿಕರ ಸಂಖ್ಯೆ ಈ ಮುಂತಾದ ವಿವರಗಳನ್ನು ಮಂಡಿಸಿರುವ ಒಂದು ಸೂಚನಾ ಪತ್ರವನ್ನು ಮುಖ್ಯ ಪರಿಶೀಲನಾಧಿಕಾರಿಗಳಿಗೆ (ಚೀಫ್ ಇನ್ಸ್ ಕ್ಟರ್) ಸಲ್ಲಿಸ ತಕ್ಕದ್ದು. ಪರಿಶೀಲನಾಧಿಕಾರಿಯು ವಿಚಾರಣೆ ನಡೆಸಿ, ಆ ನಂತರ, ಪರವಾನಗಿಯನ್ನು ನೀಡುತ್ತಾರೆ.

ಅಪಾಯಕಾರಿ ಪ್ರಕ್ರಿಯೆಗಳಿಗೆ ಪರವಾನಗಿ ನೀಡಲು ಒಂದು "ನಿವೇಶನ ಮೌಲ್ಯ ನಿರ್ಣಯೀಕರಿಸುವ ಸಮಿತಿ" ಯನ್ನು ರಚಿಸಲಾಗುತ್ತದೆ.(ಸೈಟ್ ಅಪ್ರೈಸಲ್ ಕಮಿಟಿ = Site Appraisal Committee, SAC = ಎಸ್ ಎ ಸಿ) ಈ ಎಸ್ ಎ ಸಿ(SAC)ಯು ಇತರ ಸದಸ್ಯರುಗಳೂ ಸೇರಿದಂತೆ ಎಸ್ ಪಿ ಸಿ ಬಿ(SPCB) ಹಾಗೂ ಸಿ ಪಿ ಸಿ ಬಿ(CPCB), ಈ ಮಂಡಲಿಗಳಿಂದಲೂ ಕೆಲವು ಸದಸ್ಯರನ್ನು ಹೊಂದಿರುತ್ತದೆ. ಸಿ ಐ(CI) ಅವರು ಮತ್ತು ಅವರಿಂದ ನೇಮಿಸಲ್ಪಟ್ಟ ವ್ಯಕ್ತಿಗಳು ಯಾವುದೇ ಸಮಂಜಸವಾದ ಸಮಯದಲ್ಲಿ ಕಾರ್ಖಾನೆಯೊಳಗೆ ಪ್ರವೇಶಿಸಿ ಅಲ್ಲಿಯ ಉತ್ಪನ್ನಗಳ ಮಾದರಿಗಳನ್ನು (ಸ್ಯಾಂಪಲ್ಸ್) ತಮ್ಮ ವಶಕ್ಕೆ ತೆಗೆದುಕೊಳ್ಳುವ ಅಧಿಕಾರವನ್ನು ಹೊಂದಿರುತ್ತಾರೆ.



# 03 ದೂರುಗಳ ದಾಖಲಾತಿ

# 03


# ದೂರುಗಳ ದಾಖಲಾತಿ

ಈ ಮೇಲಿನ ಉಪವಿಭಾಗಗಳಲ್ಲಿ ಜಲ ಮಾಲಿನ್ಯವನ್ನು ಎದುರಿಸಿ ತಡೆಗಟ್ಟಲು ಬಳಸಬಹುದಾದ ಹಲವಾರು ಕಾನೂನು (ಕಾಯಿದೆ)ಗಳನ್ನು ವಿವರಿಸಲಾಗಿದೆ. ಆದರೆ, ಬರೇ ಕಾನೂನನ್ನು ಮಾತ್ರ ತಿಳಿದಿರುವುದು ಸಾಲದು. ಕಾನೂನುಗಳನ್ನು ಸರಿಯಾದ ಕ್ರಮದಲ್ಲಿ ಬಳಸದೆ ಇದ್ದಲ್ಲಿ ಪರಿಣಾಮಕಾರಿ ಪರಿಹಾರಗಳನ್ನು ಪೂರೈಸುವುದು ಕಷ್ಟಕರ. ಅಂತೆಯೆ, ಈ ಉಪವಿಭಾಗದಲ್ಲಿ ಕಾನೂನನ್ನು ಬಳಸುವ ಮಾರ್ಗಗಳನ್ನು ಪಟ್ಟಿ ಮಾಡಲಾಗಿದೆ.

## ನಿದರ್ಶನಗಳನ್ನು ಸಂಕಲಿಸುವುದು (ಸಂಗ್ರಹಿಸುವುದು)


### A. ದಾಖಲೆಗಳು

| ದಾಖಲೆಗಳ ನಮೂನೆ | ಲಭ್ಯವಿರುವ ಸ್ಥಳ | ಯಾವುದಕ್ಕೆ ಉಪಯುಕ್ತ(ವಾದದ್ದು) |
|---|---|---|
| ಕಾರ್ಯ ನಿರ್ವಹಿಸಲು ಸಮ್ಮತಿ<br><br>ಸ್ಥಾಪಿಸಲು ಸಮ್ಮತಿ | ರಾಜ್ಯ ಮಲಿನ್ಯ ನಿಯಂತ್ರಣ ಮಂಡಲಿ | • ವಿಸರ್ಜನಾ ಸ್ಥಳದ / ಬಹಿದ್ವಾ‌ರ ದ ಗುರುತಿಸುವಿಕೆ<br>• ಪರವಾನಗಿಯ ಅವಧಿ.<br>• ಬಿಡುಗಡೆ ಮಾಡಿರುವ ಹೊರಸೂಸುವಿನ ಗುಣಲಕ್ಷಣದ ಸ್ವರೂಪ ಮತ್ತು (ಅದರ) ಸಂಯೋಜನೆ |
| ಉದ್ಯಮದ ಭೌತಿಕ ಗಾತ್ರಾನುಸಾರ ಮತ್ತು ವಾಸ್ತವ ಸ್ಥಿತಿಗನುಗುಣವಾಗಿ ಪರಿಸರ ಪರವಾನಗಿ | ವರ್ಗ(ಕ್ಯಾಟಗರಿ) (A) ಎ:<br>ಎಮ್ ಒ ಎಫ್ ಸಿಸಿ, ನವ ದೆಹಲಿ | • ಯೋಜನೆ / ಚಟುವಟಿಕೆ ಯು ಜಲ ಮಾಲಿನ್ಯವನ್ನು ಉಂಟುಮಾಡುವ ಸಾಧ್ಯತೆ ಇದ್ದಲ್ಲಿ, ಅದಕ್ಕನುಸಾರವಾಗಿ ಅಲ್ಲಿ ನೀರಿನ ವಿಸರ್ಜನೆಗೆ (ಹಲವು) ಷರತ್ತುಗಳಿರುತ್ತವೆ.<br>• ಈ ಷರತ್ತುಗಳನ್ನು ಓದಿ ಅರಿತ್ತಿದ್ದರೆ, ಅವುಗಳನ್ನು ಅನುಸರಿಸಲಾಗುತ್ತಿದೆಯೆ ಎಂದು ಪರಿಶೀಲಿಸಲು ಇ ಸಿ(EC) ಷರತ್ತುಗಳು ಉಪಯುಕ್ತ. |
| | ವರ್ಗ(ಕ್ಯಾಟಗರಿ) (B) ಬಿ: ರಾಜ್ಯ ಮಟ್ಟದ ಪರಿಸರ ಪರಿಣಾಮ ಮೌಲ್ಯೀಕರಣ ಪ್ರಾಧಿಕಾರ, (ಎಸ್ ಇ ಐ ಎ ಎ = SEIAA) | |
| | ವರ್ಗ(ಕ್ಯಾಟಗರಿ) (B) ಬಿ2 (ಲಘು ಖನಿಜಗಳು): ಜಿಲ್ಲಾ ಮಟ್ಟದ ಪರಿಸರ ಪರಿಣಾಮ ಮೌಲ್ಯೀಕರಣ ಪ್ರಾಧಿಕಾರ, (ಡಿ ಇ ಐ ಎ ಎ = DEIAA) | |
| | ಎಸ್ ಪಿ ಸಿ ಬಿ ಗಳಲ್ಲಿ(SPCBs) ಸಹ ಲಭ್ಯವಿರುತ್ತದೆ. | |
| ಇ ಸಿ (EC) ವರದಿಗಳ ಮೇಲ್ವಿಚಾರಣೆ ಮತ್ತು ಅನುಸರಣೆ | ಎಮ್ ಒ ಇ ಎಫ್ ಸಿ ಸಿ(MoEFCC) ಯ ಪ್ರಾದೇಶಿಕ ಕಛೇರಿಗಳು (ಇದನ್ನು ರಾಜ್ಯ ಮಟ್ಟದ ಕರಪತ್ರದಲ್ಲಿ ನಿರ್ದಿಷ್ಟವಾಗಿ ನಮೂದಿಸಿರ ತಕ್ಕದ್ದು) | • ನೀರಿನ ವಿಸರ್ಜನೆಗೆ ಆ ಮೊದಲೆ ನಮೂದಿಸಿರುವ ಷರತ್ತುಗಳ ಅನುಸರಣೆ ಆಗಿದೆಯೆ ಇಲ್ಲವೆ ಎಂಬುದನ್ನು ಕಂಡುಕೊಳ್ಳುವುದು ಉಚಿತ |
| | ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಲಿ | |



### A. ಛಾಯಾ ಚಿತ್ರಗಳ ಮತ್ತು ವಿಡಿಯೊ ತುಣುಕುಗಳು :

ಛಾಯಾಚಿತ್ರದ ನಿದರ್ಶನಗಳ ಮೂಲಕ ವಾಸ್ತವ ಸನ್ನಿವೇಶ ಏನು ಮತ್ತು ಹೇಗಿದೆ ಎಂದು ಬಿಂಬಿಸಲು ಛಾಯಾಚಿತ್ರಗಳು ಉಪಯುಕ್ತವಾಗಿರುತ್ತವೆ . ಛಾಯಾಚಿತ್ರಗಳನ್ನು ತೆಗೆದ ಮತ್ತು ವಿಡಿಯೊವನ್ನು ತೆಗೆದ ಸಮಯ ಮತ್ತು ತಾರೀಖನ್ನು ದಾಖಲಿಸುವುದು ಇಲ್ಲಿ ಬಹು ಮುಖ್ಯ.



### B. ದಿನ ಪತ್ರಿಕೆಗಳ ವರದಿಗಳು:

ಇಂತಹ ವಿಷಯ/ಗಳು ದಿನ ಪತ್ರಿಕೆಗಳಲ್ಲಿ ವರದಿಯಾಗಿದ್ದಲ್ಲಿ, ದೂರನ್ನು ಬೆಂಬಲಿಸಲು ಅವು ಹೆಚ್ಚುವರಿ ನಿದರ್ಶನಗಳಂತಾಗುತ್ತವೆ. ಆದಾಗ್ಯೂ, ದಿನ ಪತ್ರಿಕೆಯಲ್ಲಿ ವರದಿಯಾಗಿರುವುದನ್ನು ನಿದರ್ಶನವಾಗಿ ಬಳಸುವ ಮುನ್ನ, ಪ್ರಸ್ತುತ ವರದಿಯು ಅಧಿಕೃತವಾಗಿದೆಯೆ ಹಾಗೂ ನ್ಯಾಯಸಮ್ಮತವಾಗಿ ಸ್ಥಿರೀಕರಿಸಲಾಗಿದೆಯೆ ಎಂದು ಖಚಿತ ಪಡಿಸಿ ಕೊಳ್ಳಬೇಕು.


## II. ದೂರುಗಳ ಅಳವಡಿಕೆ / ರೂಪಣ



### ಯಾವಾಗ ದೂರನ್ನು ದಾಖಲಿಸ ಬಹುದು?

ದೂರನ್ನು ಈ ಕೆಳಗಿನ ಸಂದರ್ಭಗಳಲ್ಲಿ ಮಾಡಬಹುದು:

- ಅನುಮತಿಯನ್ನು ಕೇಳಿ ಪಡೆಯದೆ ಇದ್ದಾಗ;
- ನಿರ್ದಿಷ್ಟವಾಗಿ ನಮೂದಿಸಿದ ಷರತ್ತುಗಳ ಉಲ್ಲಂಘನೆ ಆಗಿದ್ದಲ್ಲಿ;
- ಮೇಲಿನ ಉಪ ವಿಭಾಗದಲ್ಲಿ ನಮೂದಿಸಿರುವ ಕಾನೂನಿನ ಕಟ್ಟಳೆಗಳ ಉಲ್ಲಂಘನೆ ಆಗಿದ್ದಲ್ಲಿ.



### ದೂರು ಏನೇನನ್ನು ಒಳಗೊಂಡಿರಬೇಕು?

- ಉಲ್ಲಂಘನೆಯ ಸ್ವರೂಪ;
- ಸುತ್ತಮುತ್ತಲಿನ ಜನಗಳ ಮೇಲೆ ಉಲ್ಲಂಘನೆಯಿಂದಾಗಿರುವ ಪರಿಣಾಮ;
- (ದೂರನ್ನು) ಬೆಂಬಲಿಸುವ ನಿದರ್ಶನಗಳು;
- ಕೋರಿರುವ ಪರಿಹಾರದ ಮಂಡನೆ

### ದೂರನ್ನು ಯಾರಿಗೆ ಕಳುಹಿಸಬೇಕು?

| | |
|---|---|
| ಸಿ ಟಿ ಒ (CTO), ಸಿ ಟಿ ಇ(CTE) ಮತ್ತು ಜಲ ಅಧಿನಿಯಮದ ಕಟ್ಟಳೆಗಳ ಉಲ್ಲಂಘನೆ | ಎಸ್ ಪಿ ಸಿ ಬಿ ಯ ( SPCB) ಯಾವುದೇ ಒಂದು ಪ್ರಾದೇಶಿಕ ಕಛೇರಿ |
| | ಎಸ್ ಪಿ ಸಿ ಬಿ ಯ ( SPCB) ಪ್ರಧಾನ ಕಛೇರಿ |
| ಇ ಸಿ(EC) ಷರತ್ತುಗಳ ಉಲ್ಲಂಘನೆ | ಎಮ್ ಒ ಎಫ್ ಸಿ ಸಿ ಯ(MoEFCC) ಪ್ರಾದೇಶಿಕ ಕಛೇರಿ |
| | ಎಸ್ ಇ ಐ ಎ ಎ (SEIAA) |
| | ಡಿ ಇ ಐ ಎ ಎ (DEIAA) |
| ಸಾರ್ವಜನಿಕ ಉಪದ್ರವ | ಜಿಲ್ಲಾ ಕಲೆಕ್ಟರ್ / ಮ್ಯಾಜಿಸ್ಟ್ರೇಟ್ |

## ಆಡಳಿತಾತ್ಮಕ ಪರಿಹಾರಗಳಿಗೆ ಕಾನೂನಿನಲ್ಲಿರುವ ಆಯ್ಕೆಗಳು ಯಾವ್ಯಾವು?

| ಸನ್ನಿವೇಶ | ಲಭ್ಯವಿರುವ ಪರಿಹಾರ |
|---|---|
| ಯಾವುದೇ ರೀತಿಯ ಸಮ್ಮತಿಯಿಲ್ಲದೆ ಕಾರ್ಯಾಚರಣೆ / ಕಾರ್ಯ ನಿರ್ವಹಣೆ | • ಕಾರ್ಯಚರಣೆಯ ಕುರಿತು ಇರುವ ನಿರ್ದಿಷ್ಟ ಷರತ್ತುಗಳನ್ನು ಉಲ್ಲೇಖಿಸಿರುವ ಎಸ್ ಪಿ ಸಿ ಬಿ ಯಿಂದ ಅಧಿಸೂಚನೆಯನ್ನು ಜಾರಿಗೊಳಿಸ ಬೇಕು |
| ಅನುಮತಿಯಲ್ಲಿ ನಮೂದಿಸಿರುವ ಷರತ್ತುಗಳ ಅನನುಸರಣೆ | • ಎಸ್ ಪಿ ಬಿ ಸಿ ಯಿಂದ ಶೋ ಕಾಝ್ ನೋಟೀಸ್ ಜಾರಿ.<br>• ಎಸ್ ಪಿ ಸಿ ಬಿ ಯಿಂದ ಕಾರ್ಯವನ್ನು ನಿಲ್ಲಿಸುವಂತೆ ಆದೇಶವನ್ನು ಹೊರಡಿಸುವುದು |
| ಶೋ ಕಾಝ್ ನೋಟೀಸ್ ಗೆ / ಅದರಲ್ಲಿ ಹೇಳಿರುವ ಪ್ರಮಾಣ ವಚನದ ಉಲ್ಲಂಘನೆಯಾಗಿರುವ ನೋಟಿಸ್ ಗೆ ಪ್ರತಿಕ್ರಯಿಸದೆ ಇರುವುದು. | • ಮಾಲಿನ್ಯವನ್ನುಂಟು ಮಾಡುತ್ತಿರುವ ಚಟುವಟಿಕೆಯ ಮುಚ್ಚುವಿಕೆ,, ನಿರ್ಬಂಧನೆ, ಅಥವಾ ಕ್ರಮಬದ್ಧ ಗೊಳಿಸುವಿಕೆ<br>• ನೀರು, ವಿದ್ಯುತ್ ಸರಬರಾಜು ಅಥವಾ ಈ ರೀತಿಯ ಇನ್ನಿತರ ಸೇವೆಗಳನ್ನು ಸ್ಥಗಿತಗೊಳಿಸುವುದು |
| ಜಲ ಅಧಿನಿಯಮದ ಅಡಿಯಲ್ಲಿ ನೀಡಿರುವ ನಿರ್ದೇಶನಗಳನ್ನು ಅನುಸರಿಸುವುದರಲ್ಲಿ ವೈಫಲ್ಯ. | • ಸೆರವಾಸ, ದಂಡ, ಅಥವಾ ಎರಡೂ ಸೇರಿ ಶಿಕ್ಷಾರ್ಹ ವಾದದ್ದು. |
| ಇ ಸಿ ಯಲ್ಲಿ ನಿರ್ದಿಷ್ಟ ಪಡಿಸಿರುವ ಷರತ್ತುಗಳ ಅನನುಸರಣೆ | • ಇ ಪಿ ಎ 1986 ಪ್ರಕಾರ ಸೆರೆವಾಸ ಮತ್ತು ದಂಡ ಇವುಗಳ ಮೂಲಕ ಶಿಕ್ಷಾರ್ಹ. ಇದರ ಅರ್ಥ - ೫ ವರ್ಷಗಳ ಸೆರೆವಾಸ ಅಥವಾ 1 ಲಕ್ಷ ರೂಪಾಯಿಗಳ ದಂಡ ಅಥವಾ ಅವೆರಡೂ ಕೂಡಿದಂತೆ ಶಿಕ್ಷೆ<br>• ಅನನುಸರಣೆಯ ಫಲವಾಗಿ ಇ ಸಿ ಯ ವಾಪಸಾತಿ |
| ಸಾರ್ವಜನಿಕ ಉಪ ದ್ರವ | • ಜಿಲ್ಲಾ ಕಲೆಕ್ಟರ್ ಅವರ ಆದೇಶವನ್ನು ಜಾರಿಗೊಳಿಸುವುದು |
| | • ಮಾಲಿನ್ಯವನ್ನುಂಟುಮಾಡಿರುವ ಪ್ರದಾರ್ಥವನ್ನು ಹೊಳೆ, ಬಾವಿ ಮತ್ತು ಭೂ ಪ್ರದೇಶದಿಂದ ತೆಗೆದು ತಕ್ಕ ರೀತಿಯಲ್ಲಿ ವಿಲೆವಾರಿ ಮಾಡುವುದು.<br>• ಈ ತರಹದ ಪದಾರ್ಥ ಗಳಿಂದ ಆಗಿರುವ ಮಾಲಿನ್ಯವನ್ನು ನಿವಾರಿಸ ಬಹುದು ಅಥವಾ ತಗ್ಗಿಸ ಬಹುದು<br>• ಸಂಬಂಧಿತ ವ್ಯಕ್ತಿಗೆ ವಿಸರ್ಜನೆ ಮಾಡದಂತೆ ತಡೆಯಾಜ್ಞೆಯ ಅಥವಾ ನಿರ್ಭಂದನೆಗೊಳ ಪಡಿಸುವ ಆದೇಶವನ್ನು ಹೊರಡಿಸಬಹುದು. |

ಸಮುದಾಯ ಮಟ್ಟದ ಪರಿಸರ ನ್ಯಾಯ ವೃತ್ತಿಪರರು ಅಥವಾ ನೆಲಮಟ್ಟದ ಪರಿಸರ ಕಾನೂನು ಸಂಯೋಜಕರು ಕಾನೂನು ಜಾಗೃತಿ ಹಾಗೂ ಸಬಲೀಕರಣ ಬಳಸಿ ತೊಂದರೆಗೆ ಒಳಗಾದ ಸಮುದಾಯಗಳಿಗೆ ಆಡಳಿತಾತ್ಮಕ ಮಾರ್ಗದ ಮೂಲಕ ಕಾನೂನು ಬದ್ಧ ಪರಿಹಾರಗಳನ್ನು ಹುಡುಕಿಕೊಡುವಲ್ಲಿ ನೆರವಾಗುತ್ತಾರೆ. ಈ ಕೈಪಿಡಿಯು ಅಂತಹ ವೃತ್ತಿಪರರಿಗೆ ಕಾನೂನಿನ ವಿಧಿಗಳು ಮತ್ತೂ ಸಾಂಸ್ಥಿಕ ಮಾರ್ಗವನ್ನು ಬಳಕೆ ಮಾಡಲು ಸಹಾಯವಾಗುವ ಮಾರ್ಗಸೂಚಿಯಾಗಿರುತ್ತದೆ. ಈ ಕೈಪಿಡಿಯು ಕೆಲವು ಸಮಸ್ಯೆಯ ಪ್ರಕಾರಗಳನ್ನು ಒಳಗೊಂಡಿರುವ ಸನ್ನಿವೇಶಗಳು, ಪರಿಸರ ನ್ಯಾಯ ವೃತ್ತಿಪರರ ಬಳಿಗೆ ಸಾಮಾನ್ಯವಾಗಿ ಬರುವಂತಹ ದೂರುಗಳು ಹಾಗೂ ಕಾನೂನು ಬದ್ಧ ವಿಧಿಗಳು ಮತ್ತೂ ಆಯಾ ದೂರಿಗೆ ಕಾನೂನು ಬದ್ಧ ಪರಿಹಾರಗಳನ್ನು ಪಡೆದುಕೊಳ್ಳಬಹುದಾದ ಸಂಸ್ಥೆಗಳ ಬಗ್ಗೆ ಮಾಹಿತಿಯನ್ನು ಒದಗಿಸುತ್ತದೆ. ಈ ಕೈಪಿಡಿಯಲ್ಲಿ ಪ್ರಸ್ತುತಪಡಿಸಿರುವ ಸನ್ನಿವೇಶಗಳು ವಿವರಾಣಾತ್ಮಕವಾಗಿರುತ್ತದೆ ಹಾಗೂ ಇವುಗಳನ್ನು ಸೆಂಟರ್ ಪಾರ್ ಪೊಲಿಸಿ ರಿಸರ್ಚ್ - ನಮತಿ ಪರಿಸರ ನ್ಯಾಯ ಯೋಜನೆಯೊಂದಿಗೆ ಪರಿಸರ ಕಾನೂನು ಸಂಯೋಜಕರು ಹಲವು ಸಂದರ್ಭಗಳಲ್ಲಿ ಪರಿಹಾರ ಕಂಡುಕೊಳ್ಳಲು ನಡೆಸುತ್ತಿರುವ ದೃಷ್ಟಾಂತಗಳಿಂದ ಆಯ್ದು ಕೊಳ್ಳಲಾಗಿರುತ್ತದೆ.

## ಸೆಂಟರ್ ಪಾರ್ ಪೊಲಿಸಿ ರಿಸರ್ಚ್ ಸಂಸ್ಥೆಯ ಬಗ್ಗೆ:

ಸೆಂಟರ್ ಪಾರ್ ಪೊಲಿಸಿ ರಿಸರ್ಚ್ 1973 ರಿಂದ ಭಾರತದ ಪ್ರಮುಖ ಸಾರ್ವಜನಿಕ ನೀತಿ ಚಿಂತನಾ ಸಂಸ್ಥೆಯಾಗಿದೆ. ಈ ಕೇಂದ್ರವು ಲಾಭರಹಿತ ಸ್ವತಂತ್ರ ಸಂಸ್ಥೆಯಾಗಿದೆ ಹಾಗೂ ಭಾರತದಲ್ಲಿ ನೀತಿ ರಚನೆ ಹಾಗೂ ಪ್ರಕ್ರಿಯೆಯ ಕುರಿತು ಸಾರ್ವಜನಿಕ ವಲಯದಲ್ಲಿ ಹೆಚ್ಚು ಪ್ರಚಲಿತವಾಗಿ ಈ ಮೂಲಕ ಭಾರತದಲ್ಲಿ ಜೀವನವನ್ನು ರೂಪಿಸುವ ನಿಟ್ಟಿನಲ್ಲಿ ಸಂಶೋಧನೆ ಅಧ್ಯಯನಗಳನ್ನು ನಡೆಸುವುದುಕ್ಕೆ ಮುಡಿಪಾಗಿದೆ,

www.cprindia.org

## ನಮತಿ ಬಗ್ಗೆ:

ಕಾನೂನಿನ ರಕ್ಷಣೆಯಿಂದ ಹೊರಗೆ 100 ಕೋಟಿಗೂ ಹೆಚ್ಚು ಜನರು ವಾಸಿಸುತ್ತಿರುವ ಈ ಜಗತ್ತಿನಲ್ಲಿ ನಮತಿ ಸಂಸ್ಥೆಯು ಕಾನೂನನ್ನು ಜನರ ಕೈಗೆ ತಲುಪಿಸುವಲ್ಲಿ ಮುಡಿಪಾಗಿದೆ. ನ್ಯಾಯವನ್ನು ಮುನ್ನೆಡಸಲು ಅದು ಸಮುದಾಯಗಳೊಂದಿಗೆ ಕೆಲಸ ಮಾಡುವ ನೆಲಮಟ್ಟದ ನ್ಯಾಯವಾದಿ ವೃತ್ತಿಪರರೊಂದಿಗೆ ಜಾಗತಿಕ ಆಂದೋಲನವನ್ನು ನಿರ್ಮಿಸುತ್ತಿದೆ. ಈ ನ್ಯಾಯವಾದಿಗಳು, ಜನರು ಅವರ ಭೂಮಿಯನ್ನು ರಕ್ಷಿಸುವುದು, ಅಗತ್ಯ ಸೌಲಭ್ಯಗಳನ್ನು ಪಡೆದುಕೊಳ್ಳುವುದು ಹಾಗೂ ಅವರ ಜೀವನದ ಮೇಲೆ ಪ್ರಭಾವ ಬೀರುವ ನಿರ್ಣಯಗಳನ್ನು ತೆಗೆದುಕೊಳ್ಳುವಲ್ಲಿ ಭಾಗಿ ಆಗುವುದನ್ನು ಖಚಿತಪಡಿಸಿಕೊಳ್ಳುವ ನಿಟ್ಟಿನಲ್ಲಿ ಮೆಲ್ಪಂಕ್ತಿಯಲ್ಲಿ ಹೋರಾಡುತ್ತಿದ್ದಾರೆ.

www.namati.org